ಶ್ರೀ ಎ. ವಿ. ನರಸಿಂಹರೆಡ್ಡಿ.—ಮುನಿಸಿಪಲ್ ಕೌನ್ಸಿಲ್‌ನವರೂ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಡೈರೆಕ್ಟರೂ ಷಿಫ್ಟ್ ಮಾಡಬೇಕೆಂದು ಹೇಳುವಾಗ ಸರ್ಕಾರದವರು ಅದನ್ನು ಯೋಚನೆ ಮಾಡುವುದು ಒಳ್ಳೆಯದಲ್ಲವೆ?

ಶ್ರೀ ಟಿ. ಚನ್ನಯ್ಯ.—ಅದನ್ನು ಯೋಚನೆ ಮಾಡಿ ಈಗ ನಧ್ಯಕ್ಕೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರ ಅಭಿಪ್ರಾಯಪಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಅನ್ವೇಷಣೆಗಾಗಿ ತಾವೆಷ್ಟು ಖರ್ಚು ಮಾಡುತ್ತಿರುವುದು?

ಶ್ರೀ ಟಿ. ಚನ್ನಯ್ಯ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಕಟ್ಟಿರುವ ವಾರ್ಡುಗಳ ಬ್ಲಾಕಿಗೆ ಎಷ್ಟು ಖರ್ಚಾಗಿದೆ?

Sri T. CHANNIAH.—It is not possible to give that information now.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗಾಗಲೆ 54 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬ್ಲಾಕನ್ನು ಕಟ್ಟಿದೆ. ಅದನ್ನು ಉಪಯೋಗಿಸುವ ದೃಷ್ಟಿಯಿಂದ ಮತ್ತು ಮುನಿಸಿಪಲ್ ಕೌನ್ಸಿಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಷಿಫ್ಟ್ ಮಾಡಬೇಕೆಂದು ಹೇಳಿರುವೆದರಿಂದ ಇನ್ನೊಂದು ಸಾರಿ ಈ ಪ್ರಶ್ನೆಯನ್ನು ಪರಿಶೀಲಿಸುವುದು ಒಳ್ಳೆಯದಲ್ಲವೆ?

Mr. SPEAKER.—It is a matter of opinion.

---

## Buildings for Schools in Arsikere Taluk.

*Q.*—545. Sri B. CHIKKANNA (Javagal).—

Will the Government be pleased to state:—

(*a*) the number of primary, middle and high schools in Arsikere Taluk;

(*b*) the number of primary, middle and high schools for which buildings have been constructed by them;

(*c*) the number of primary and middle schools for which buildings have been constructed by the villagers;

(*d*) the amount of grant given to each of the buildings constructed by the villagers?

*A.*—Sri A. G. RAMACHANDRA RAO (Minister for Law and Education).—

| | | | |
|---|---|---|---|
| (*a*) | (1) | High Schools ... | 2 |
| | (2) | Middle Schools ... | 9 |
| | (3) | Primary Schools ... | 151 |
| (*b*) | (1) | High Schools ... | ... |
| | (2) | Middle Schools ... | 8 |
| | (3) | Primary Schools ... | 33 |
| (*c*) | (1) | Middle Schools ... | ... |
| | (2) | Primary Schools and N. T. M. Schools. | 6 |

(*d*) Nil so far.

ಶ್ರೀ ಬಿ. ಚಿಕ್ಕಣ್ಣ.—ಅರಸೀಕೆರೆ ತಾಲ್ಲೂಕಿನಲ್ಲಿ ಮಾಧ್ಯಮಿಕ ಶಾಲೆ ಮತ್ತು ಪ್ರಾಥಮಿಕ ಶಾಲೆ ಕಟ್ಟಡಗಳಿಗಾಗಿ ಗ್ರಾಮಸ್ಥರು ಎಷ್ಟು ಹಣ ಡಿಪಾಜಿಟ್ ಮಾಡಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಪಾಜಿಟ್ ಮಾಡಿಲ್ಲ. ಸ್ಕೂಲು ಕಟ್ಟಡಗಳಿಗಾಗಿ ಗ್ರಾಮಸ್ಥರು ಎಷ್ಟು ಖರ್ಚು ಮಾಡಿದ್ದಾರೆಂದು ಎಸ್ಟಿಮೇಟ್ ಮಾಡಿದೆ. ಆರು ಸ್ಕೂಲುಗಳ ಹೈಕಿ ಐದು ಸ್ಕೂಲುಗಳ ಸಮಾಚಾರ ಗೊತ್ತಾಗಿದೆ; ಎಗ್ಜಿಕ್ಯುಟಿವ್ ಇಂಜಿನಿಯರು ತಿಳಿಸಿದ್ದಾರೆ, ಇನ್ನೊಂದರ ಸಮಾಚಾರ ಗೊತ್ತಾಗಿಲ್ಲ. ಇದರ ಹೈಕಿ ಗಂಡಸಿ ಹೋಬಳಿ ಅರಾಡಿ ಹೆಳ್ಳಿ ಪ್ರೈಮರಿ ಸ್ಕೂಲಿಗೆ 6,000 ರೂಪಾಯಿ, ಹುಲ್ಲೇಕೆರೆ ಪ್ರೈಮರಿ ಸ್ಕೂಲಿಗೆ 9,300 ರೂಪಾಯಿ, ಚಿಕ್ಕಯಾರಗನಲು ಪ್ರೈಮರಿ ಸ್ಕೂಲಿಗೆ 11,300 ರೂಪಾಯಿ, ಚಿಕೂರು ಪ್ರೈಮರಿ ಸ್ಕೂಲಿಗೆ 15 ಸಾವಿರ ರೂಪಾಯಿ, ಕರ್ಯಾಡಿ ಎಕ್.ಟಿ.ಎಂ. ಸ್ಕೂಲಿಗೆ 9,415 ರೂಪಾಯಿ ಖರ್ಚಾಗಿದೆ. ಕಲಗುಂಡದ ಎಕ್.ಟಿ ಎಂ. ಸ್ಕೂಲಿನ ಸಮಾಚಾರ ತಿಳಿಸಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಚಿಕ್ಕೂರು ಸ್ಕೂಲಿಗೆ ಸರ್ಕಾರದವರು ಎಷ್ಟು ಗ್ರಾಂಟ್ ಕೊಟ್ಟಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—7,500 ರೂಪಾಯಿ ಇರಬೇಕು ಅಂತ ಕಾಣುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಆ ತಾಲ್ಲೂಕಿನಲ್ಲಿ 151 ಪ್ರೈಮರಿ ಸ್ಕೂಲುಗಳು ಇವೆ ಎಂದು ಹೇಳಿದ್ದೀರಿ. ಸ್ಕೂಲು ಕಟ್ಟಡ ಕೊಟ್ಟಿರುವುದು ಒಟ್ಟು 39 ಸ್ಕೂಲುಗಳಿಗೆ. ಇನ್ನು ಬಾಕಿ 112 ಸ್ಕೂಲುಗಳಿಗೆ ಬಾಡಿಗೆ ಕೊಡುತ್ತಾ ಇದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ಕಟ್ಟಡಗಳಿಗೆ ಬಾಡಿಗೆ ಕೊಡುತ್ತಾ ಇದ್ದಾರೆ. ಕೆಲವು ಮುಫತ್ತಾಗಿಯೂ ಇವೆ.

ಶ್ರೀ ಡಿ. ಆರ್. ಕರಿಗೌಡ.—ಆ ತಾಲ್ಲೂಕಿನಲ್ಲಿ ಖಾಸಗೀ ಕಟ್ಟಡ ಯಾವುದಕ್ಕೂ ಬಾಡಿಗೆ ಕೊಡುತ್ತಾ ಇಲ್ಲ ಎಂಬುದು ಗೊತ್ತೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲೂ ಕೆಲವು ಕಡೆ ಕೊಡುತ್ತಾ ಇದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಖಾಸಗಿ ಜನಗಳು ತಾವಾಗಿಯೇ ಸ್ಕೂಲು ಕಟ್ಟಡಗಳನ್ನು ಕಟ್ಟಿ ಕೊಟ್ಟರೆ, ಸರ್ಕಾರದವರು ಅರ್ಧ ಹಣ ಕೊಡಬೇಕೆಂದು ನಿರೀಕ್ಷೆ ಮಾಡಿದರೆ ಅದಕ್ಕೆ ಅವಕಾಶ ಕಲ್ಪಿಸಿ ಕೊಂಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಅರಸೀಕೆರೆ ತಾಲ್ಲೂಕಿನಲ್ಲಿ ಈ ರೀತಿ ಅರ್ಧ ಹಣ ಕೊಡಬೇಕೆಂದು ಹೇಳಿ ಎಷ್ಟು ಅರ್ಜಿಗಳು ಬಂದಿವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರು ಗ್ರಾಮಗಳಿಂದ ಬಂದಿವೆ. ಪರಿಶೀಲನೆ ಮಾಡಿಸುತ್ತಾ ಇದ್ದೇವೆ. ಬಾಕಿಯಿದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

---

## Non-Graduate Teachers in the Education Department (Grant of 1st grade's pay).

*Q.*—829. Sri T. C. BASAPPA (Tarikere).—

Will the Government be pleased to state:—

(*a*) whether it is a fact that non-graduate II Division Clerks in the